**ಪ್ರತಿ ಸಲ ಐಪಿಎಲ್ ಆರಂಭವಾಗುತ್ತಿದ್ದಂತೆ ಆಟಗಾರರಿಗಿಂತ ಅಭಿಮಾನಿಗಳೇ ಹೆಚ್ಚು ಪುಳಕಗೊಳ್ಳುತ್ತಾರೆ. ಆಟದ ಜೊತೆಗೆ, ಚಿಯರ್ ಬೆಡಗಿಯರ ನೃತ್ಯ, ಮೋಜು, ಮಸ್ತಿ ಕೂಡ ಬಹುತೇಕರ ಆಸಕ್ತಿಗೆ ಕಾರಣ.**

ಮೂರಕ್ಷರಗಳ 'ಐಪಿಎಲ್', ಮೂರು ಪದಗಳ 'ಇಂಡಿಯನ್ ಪ್ರೀಮಿಯರ್ ಲೀಗ್' – ಕಳೆದ 14 ವರ್ಷಗಳಲ್ಲಿ ಕ್ರಿಕೆಟ್ ಪ್ರೇಮಿಗಳನ್ನು ಮೋಡಿ ಮಾಡಿ ಚುಂಬಕ ಶಕ್ತಿಯಂತೆ ಸೆಳೆದಿರುವ 'ಕ್ರಿಕೆಟ್' ಎನ್ನುವ ಮೂರಕ್ಷರಗಳ ಆಟದ, 'ಚುಟುಕು' ಎನ್ನುವ ಮೂರಕ್ಷರಗಳ ವಿಶೇಷಣದ ಮಾಯೆಯಿದು.

ಭಾರತ ಕ್ರಿಕೆಟ್ ತಂಡ ತನ್ನ ಮೊದಲ ಟೆಸ್ಟ್ (1932) ಪಂದ್ಯವಾಡಿ 89 ವರ್ಷಗಳು ಉರುಳಿವೆ. ಚೊಚ್ಚಲ ಏಕದಿನ (1974) ಪಂದ್ಯವನ್ನಾಡಿ 47 ವರ್ಷಗಳಾಗಿವೆ. ಮೊದಲ ಟ್ವೆಂಟಿ–20 ಅಂತರರಾಷ್ಟ್ರೀಯ ಪಂದ್ಯವಾಡಿ 15 ವರ್ಷಗಳು ಕಳೆದಿವೆ. ಕ್ರಿಕೆಟ್‌ನ ಈ ಎಲ್ಲಾ ಮಾದರಿಗಳು ಜನ್ಮ ತಾಳಿದ ಬಳಿಕ ಶುರುವಾದ 'ಮಿಲಿಯನ್ ಡಾಲರ್ ಬೇಬಿ' ಐಪಿಎಲ್ ಈಗ ಉಳಿದ ಮಾದರಿಗಳಿಗಿಂತಲೂ ಸಾಕಷ್ಟು ಖ್ಯಾತಿ ಗಳಿಸಿಕೊಂಡಿದೆ.

ದಶಕಗಟ್ಟಲೆ ಟೆಸ್ಟ್ ತಂಡದಲ್ಲಿ ಆಡಿದ ಬಹಳಷ್ಟು ಆಟಗಾರರು ಈಗಿನ ಕ್ರಿಕೆಟ್ ಪ್ರೇಮಿಗಳಿಗೆ ನೆನಪಿಲ್ಲ. ಆದರೆ, ಕೆಲವೇ ಐಪಿಎಲ್ ಪಂದ್ಯಗಳಲ್ಲಿ ಕಾಣಿಸಿಕೊಂಡ ಹೊಸಬರು ಜನಮನದಲ್ಲಿ ಅಚ್ಚೊತ್ತಿದ್ದಾರೆ. ಕ್ರಿಕೆಟ್ ಎನ್ನುವುದೀಗ ಆಟವಾಗಿಯಷ್ಟೇ ಉಳಿದುಕೊಂಡಿಲ್ಲ. ಮನರಂಜನೆ, ಹಣ, ಹೆಸರು, ಐಷಾರಾಮಿ ಜೀವನದ ಪರ್ಯಾಯವಾಗಿ ಕ್ರಿಕೆಟ್ ಗುರ್ತಿಸಿಕೊಂಡಿದೆ. ರಾಷ್ಟ್ರೀಯ ತಂಡದಲ್ಲಿ ಅವಕಾಶ ಸಿಗದಿದ್ದರೂ ಐಪಿಎಲ್ ಮೂಲಕ ಭಾರತ ತಂಡದಲ್ಲಿ ಸ್ಥಾನ ಪಡೆದು ಹಣ–ಹೆಸರು ಮಾಡಿರುವ ಅನೇಕ ಕ್ರಿಕೆಟಿಗರು ನಮ್ಮಲ್ಲಿದ್ದಾರೆ.

ಪ್ರತಿ ಸಲ ಐಪಿಎಲ್ ಆರಂಭವಾಗುತ್ತಿದ್ದಂತೆ ಆಟಗಾರರಿಗಿಂತ ಅಭಿಮಾನಿಗಳೇ ಹೆಚ್ಚು ಪುಳಕಗೊಳ್ಳುತ್ತಾರೆ. ಆಟಕ್ಕಿಂತ ಹೆಚ್ಚಾಗಿ ಮೂರು ಗಂಟೆಯ ಅವಧಿಯ ಪಂದ್ಯದಲ್ಲಿ ಸಿಡಿಯುವ ಬೌಂಡರಿ ಹಾಗೂ ಸಿಕ್ಸರ್‌ಗಳ ಅಬ್ಬರಕ್ಕೆ ಹಾತೊರೆಯುತ್ತಾರೆ. ಆಟದ ಜೊತೆಗೆ, ಚಿಯರ್ ಬೆಡಗಿಯರ ನೃತ್ಯ, ಮೋಜು, ಮಸ್ತಿ ಕೂಡ ಬಹುತೇಕರ ಆಸಕ್ತಿಗೆ ಕಾರಣ. ಹೀಗಾಗಿ ಮೊದಲಿನ ಹಾಗೆ ಐದು ದಿನಗಳ ಟೆಸ್ಟ್ ಪಂದ್ಯಗಳಿಗಿಂತ ಕೆಲ ಸಮಯದಲ್ಲಿಯೇ ಫಲಿತಾಂಶ ಬರುವ ಐಪಿಎಲ್ ಜನರಿಗೆ ಇಷ್ಟವಾಗುತ್ತಿದೆ. ಬಹಳಷ್ಟು ಜನ ಇದನ್ನು ಕ್ರಿಕೆಟ್ ಎನ್ನುವುದಕ್ಕಿಂತ ಹೆಚ್ಚಾಗಿ ಮನರಂಜನೆ ಎನ್ನುವಂತೆ ನೋಡುತ್ತಿದ್ದಾರೆ.

ಕೋವಿಡ್ ಕಾರಣಕ್ಕಾಗಿ ಅರ್ಧದಲ್ಲಿಯೇ ಸ್ಥಗಿತಗೊಂಡಿದ್ದ ಐಪಿಎಲ್ ಪಂದ್ಯಗಳನ್ನು ಪೂರ್ಣಗೊಳಿಸಲು ಈಗ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ (ಯುಎಇ) ಪಂದ್ಯಗಳನ್ನು ಆಯೋಜಿಸಲಾಗಿದೆ. ಸೆ. 19ರಿಂದ ಪಂದ್ಯಗಳು ಆರಂಭವಾಗಲಿದ್ದು, ಅಕ್ಟೋಬರ್ 15ರಂದು ಫೈನಲ್ ನಿಗದಿಯಾಗಿದೆ.

ಐಪಿಎಲ್ ಮುಗಿದು ಒಂದು ದಿನವಷ್ಟೇ ಬಿಡುವು. 17ರಿಂದ ಯುಎಇ ಮತ್ತು ಓಮನ್‌ನಲ್ಲಿ 'ಐಸಿಸಿ ಪುರುಷರ ಟಿ–20 ವಿಶ್ವಕಪ್ ಟೂರ್ನಿ' ಆರಂಭವಾಗಲಿದೆ. ಹೀಗಾಗಿ ಬಹುತೇಕ ಎರಡು ತಿಂಗಳು ಕ್ರಿಕೆಟ್ ಪ್ರಿಯರಿಗೆ ಚುಟುಕು ಕ್ರಿಕೆಟ್ ಹಬ್ಬದ ರಸದೌತಣ ಸಿಗಲಿದೆ. ಎರಡೂ ಟೂರ್ನಿಗಳು ಒಂದಾದ ಮೇಲೆ ಒಂದು ನಡೆಯುವುದರಿಂದ 'ಟಿ–20 ವಿಶ್ವಕಪ್ ಟೂರ್ನಿ'ಗೆ ಐಪಿಎಲ್ ಅಭ್ಯಾಸಕ್ಕೆ ವೇದಿಕೆ ಎನಿಸಿದೆ.

ಟೀವಿ ಜಾಹೀರಾತು, ಫ್ರಾಂಚೈಸ್‌ಗಳ ಜೊತೆಗಿನ ಒಪ್ಪಂದ, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಗೆ (ಬಿಸಿಸಿಐ) ಕೋಟಿ ಕೋಟಿ ಹಣದ ಲಾಭದ ನಿರೀಕ್ಷೆ – ಹೀಗೆ ಹಲವು ಆರ್ಥಿಕ ಲೆಕ್ಕಾಚಾರಗಳಿಂದಾಗಿ ಐಪಿಎಲ್ ಟೂರ್ನಿ ಮುಂದುವರಿಸಲಾಗುತ್ತಿದೆ ಎನ್ನುವುದು ಗುಟ್ಟಾಗಿ ಉಳಿದಿಲ್ಲ.

ಕೋವಿಡ್ ದುರಿತ ಕಾಲದಲ್ಲೂ ಹಣದ ಹೊಳೆ ಹರಿಸುವ ಐಪಿಎಲ್ ಆಯೋಜನೆಗೆ ಯಾವುದೇ ತೊಂದರೆ ಎದುರಾಗಿಲ್ಲ. ಏನೇ ಎಡರು ತೊಡರುಗಳು

